# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು - 572 103

ದಿನಾಂಕ:05.08.2025

ಸಂಖ್ಯೆ:ತುವಿ:ಶೈವಿ:UG:2025-26/1399

## :ಪರಿಷ್ಕೃತ ಅಧಿಸೂಚನೆ:

ವಿಷಯ:- ರಾಜ್ಯ ಶಿಕ್ಷಣ ನೀತಿಯ ಸ್ನಾತಕ ಪದವಿಯ ಕಲಾ ವಿಷಯಗಳ ಪತ್ರಿಕೆಗಳ ಬೋಧನಾ ಅವಧಿಯನ್ನು ಹೆಚ್ಚಿಸಿರುವ ಕುರಿತು.

ಉಲ್ಲೇಖ:- 1) ವಿವಿ ಕಲಾ ನಿಕಾಯದ ಡೀನರ ಪತ್ರದ ದಿನಾಂಕ:04.04.2025.
2) ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಸಂಘ (ರಿ) ತುಮಕೂರು ಇವರ ಪತ್ರದ ದಿನಾಂಕ:18.07.2025
3) ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ:30.07.2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕ/ಘಟಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, 2024-25ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರದ ನಿರ್ದೇಶನದಂತೆ ರಾಜ್ಯ ಶಿಕ್ಷಣ ನೀತಿಯ ಪಠ್ಯಕ್ರಮದಂತೆ ವ್ಯಾಸಂಗ ಮಾಡುತ್ತಿದ್ದು, ಅದರಲ್ಲಿ ಸ್ನಾತಕ ಪದವಿಯ ಕಲಾ ವಿಷಯಗಳಿಗೆ ಬೋಧನಾ ಅವಧಿಯನ್ನು ವಾರಕ್ಕೆ 5 ಗಂಟೆಗಳಿಗೆ ನಿಗದಿಪಡಿಸಲಾಗಿರುತ್ತದೆ.

ಉಲ್ಲೇಖ(02)ರಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಕಾಲೇಜು ಅಧ್ಯಾಪಕರ ಸಂಘ(ರಿ) ಇವರು ಬೋಧನಾ ಅವಧಿಯನ್ನು ಹೆಚ್ಚಿಸಲು ಮನವಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ 2025-26ನೇ ಶೈಕ್ಷಣಿಕ ಸಾಲಿನಿಂದ ಎಸ್ಇಪಿ ಅಡಿಯಲ್ಲಿ ಬರುವ ಸ್ನಾತಕ ಪದವಿಯ ಕಲಾ ವಿಷಯಗಳಿಗೆ ಬೋಧನಾ ಅವಧಿಯನ್ನು ವಾರಕ್ಕೆ 5 ಗಂಟೆಯಿಂದ 6 ಗಂಟೆಗೆ ಉಲ್ಲೇಖ (01)ರ ಕಲಾ ನಿಕಾಯದ ಡೀನರ ಅಭಿಪ್ರಾಯದಂತೆ ಹೆಚ್ಚಿಸಲಾಗಿರುತ್ತದೆಂದು ಉಲ್ಲೇಖ (03)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಈ ಮೂಲಕ ಅಧಿಸೂಚಿಸಲಾಗಿದೆ.

ಮುಂದುವರೆದು, ಎಸ್ಇಪಿ ಅಡಿಯಲ್ಲಿ ಬರುವ ಉಳಿದ ಯಾವುದೇ ವಿಷಯಗಳಿಗೆ ಹಾಗೂ ಎನ್ಇಪಿ ಅಡಿಯಲ್ಲಿ ಬರುವ ಎಲ್ಲಾ ವಿಷಯಗಳಿಗೆ ಬೋಧನಾ ಅವಧಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆದೇಶದ ಮೇರೆಗೆ,

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ

1. ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು
3. ಎಲ್ಲಾ ಸ್ನಾತಕ ಕಲಾ ವಿಷಯದ ಅಧ್ಯಯನ ಮಂಡಳಿಗಳ ಅಧ್ಯಕ್ಷರು ತುಮಕೂರು ವಿಶ್ವವಿದ್ಯಾನಿಲಯ ತುಮಕೂರು- ಸೂಕ್ತ ಕ್ರಮಕ್ಕಾಗಿ
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು – ವಿವಿ ವೆಬ್‌ಸೈಟ್‌ನಲ್ಲಿ ಇಂದೇ ಪ್ರಕಟಿಸುವುದು.

ಪ್ರತಿಗಳು:

1. ಡೀನರು ಕಲಾ ನಿಕಾಯ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ತುಮಕೂರು ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಸಂಘ (ರಿ), ತುಮಕೂರು.
3. ಕುಲಸಚಿವರು (ಮೌಲ್ಯಮಾಪನ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಕಚೇರಿ ಪ್ರತಿ.